# ಅಮೆರಿಕದಲ್ಲಿ ಸ್ವಾಮಿ ವಿವೇಕಾನಂದರು

ಆಂಗ್ಲ ಮೂಲ : **ಮೇರಿ ಲೂಯಿ ಬರ್ಕ್**

ಸಂಗ್ರಹಾನುವಾದ : **ಸ್ವಾಮಿ ವೀರೇಶಾನಂದ**

## ಭಾಗ ೨೫

### ಡೆಟ್ರಾಯ್ಟ್‌ನಲ್ಲಿ ಸ್ವಾಮಿ ವಿವೇಕಾನಂದರು (ಮುಂದುವರಿದ ಭಾಗ)

ಸ್ವಾಮಿ ವಿವೇಕಾನಂದರು ಡೆಟ್ರಾಯ್ಟ್ ನಗರದಲ್ಲಿ ಅದೆಷ್ಟು ಪ್ರತಿರೋಧವನ್ನು ಎದುರಿಸಬೇಕಾಯಿತು, ಎಷ್ಟೊಂದು ಜನರ ನಿಂದನೆ, ಹೀಯಾಳಿಕೆ ಮತ್ತು ಬೆದರಿಕೆಗಳ ನಡುವೆ ಅವರು ಕಾರ್ಯವನ್ನು ಮಾಡಬೇಕಾಗಿತ್ತು ಎನ್ನುವುದನ್ನು ನಾವು ಹಿಂದಿನ ಸಂಚಿಕೆಗಳಲ್ಲಿ ತಿಳಿದುಕೊಂಡೆವು. ಆದರೆ ಪರಿಸ್ಥಿತಿಯೇನೂ ಸಂಪೂರ್ಣ ಭೀಕರವಾಗಿರಲಿಲ್ಲವೆಂದೇ ಹೇಳಬೇಕು. ಏಕೆಂದರೆ ಡೆಟ್ರಾಯ್ಟ್‌ನಲ್ಲಿ ಸ್ವಾಮೀಜಿಯವರ ಅಭಿಮಾನಿಗಳು ಬಹಳಷ್ಟು ಜನರು ಇದ್ದರು. ಸ್ವಾಮೀಜಿ ಡೆಟ್ರಾಯ್ಟ್ ನಗರದಲ್ಲಿ ಆರು ವಾರಗಳ ಕಾಲ ಇದ್ದರು. ಆ ಕಾಲದಲ್ಲಿ ಪ್ರತಿದಿನವೂ ಅವರ ವಾಸ್ತವ್ಯದಿಂದ ನಮಗೆ ಸಂತೋಷವನ್ನು ಉಂಟುಮಾಡಿದರು ಎಂದು ಆ ನಗರದಲ್ಲಿ ಸ್ವಾಮೀಜಿಯ ಆತಿಥೇಯರಾಗಿದ್ದ ಶ್ರೀಮತಿ ಬ್ಯಾಗ್ಲಿ ಒಂದು ಕಡೆ ಬರೆಯುತ್ತಾರೆ. ಅವರು ಮುಂದುವರಿದು ಹೇಳುತ್ತಾರೆ: ''ಸ್ವಾಮೀಜಿಯವರನ್ನು ಡೆಟ್ರಾಯ್ಟ್‌ನ ಹಲವಾರು ಪ್ರತಿಷ್ಠಿತ ಜನರು ತಮ್ಮ ಮನೆಗಳಿಗೆ ಆಹ್ವಾನಿಸುತ್ತಿದ್ದರು ಹಾಗೂ ಅವರಿಗೆ ಔತಣಕೂಟವನ್ನು ಏರ್ಪಡಿಸುತ್ತಿದ್ದರು. ಡೆಟ್ರಾಯ್ಟ್‌ನ ಹಲವಾರು ಸುಂದರ ಮನೆಗಳು ಅವರಿಗೆ ಮುಕ್ತವಾಗಿ ತೆರೆದಿದ್ದವು. ಅಲ್ಲೆಲ್ಲ ಹೆಚ್ಚು ಹೆಚ್ಚು ಜನರಿಗೆ ಸ್ವಾಮೀಜಿಯವರನ್ನು ಭೇಟಿಮಾಡಲು ಮತ್ತು ಮಾತನಾಡಲು ಅವಕಾಶ ಸಿಗುತ್ತಿತ್ತು. ಅವರು ಹೋದೆಡೆಯಲ್ಲೆಲ್ಲಾ ಅವರನ್ನು ಗೌರವದಿಂದ ಕಾಣಲಾಗುತ್ತಿತ್ತು. ಅದಕ್ಕೆ ಅವರು ಸಂಪೂರ್ಣವಾಗಿ ಅರ್ಹರೂ ಆಗಿದ್ದರು.''

ಡೆಟ್ರಾಯ್ಟ್ ಜರ್ನಲ್ ಎಂಬ ಪತ್ರಿಕೆಯಲ್ಲಿ ಇಂಥ ಔತಣಕೂಟಗಳ ವರದಿ ಪ್ರಕಟವಾಯಿತು. ಸ್ವಾಮೀಜಿ ಡೆಟ್ರಾಯ್ಟ್ ನಗರಕ್ಕೆ ಬಂದು ಆಗಷ್ಟೇ ಒಂದು ವಾರವಾಗಿತ್ತು, ಅಷ್ಟೆ. ಸ್ವಾಮೀಜಿಯವರ ಜೊತೆ ಪ್ರತಿಷ್ಠಿತ ಗಣ್ಯರು ಮಾತನಾಡುವಾಗ ತನ್ಮಯರಾಗುತ್ತಿದ್ದರು; ಅವರ ವ್ಯಕ್ತಿತ್ವ ಎಲ್ಲರನ್ನೂ ಮುಗ್ಧರನ್ನಾಗಿ ಮಾಡಿತ್ತು. ಹೀಗೆ ಈ ಔತಣಕೂಟಗಳಲ್ಲಿ ಹತ್ತಾರು ಜನರು ಸ್ವಾಮೀಜಿಯವರ ಸಂಪರ್ಕಕ್ಕೆ ಬಂದರು; ಅವರಿಂದ ಪ್ರಭಾವಿತರಾದರು.

ಸ್ವಾಮೀಜಿ ಅನೇಕ ಶ್ರೀಮಂತರ ಮನೆಯ ಔತಣಕೂಟದಲ್ಲಿ ಪಾಲ್ಗೊಳ್ಳಬೇಕಾಯಿತು. ಅವುಗಳಲ್ಲಿ ಯಥೇಷ್ಟವಾಗಿ ಆಹಾರವನ್ನು ಬಡಿಸುತ್ತಿದ್ದರು. ಇಂಥ ಔತಣಕೂಟಗಳು ಗಂಟೆಗಟ್ಟಲೆ ನಡೆಯುತ್ತಿದ್ದವು. ಇದನ್ನು ನೋಡಿ ಸ್ವಾಮೀಜಿ ಕಸಿವಿಸಿಗೊಂಡಿದ್ದರು. ಇವುಗಳಲ್ಲಿ ಭಾಗವಹಿಸುವುದೆಂದರೆ ಸ್ವಾಮೀಜಿಗೆ ಒಂದು ರೀತಿಯ ತಪಸ್ಸೆಯೇ ಆಗಿತ್ತು. ಇಷ್ಟಾದರೂ ಡೆಟ್ರಾಯ್ಟ್‌ನ ತಮ್ಮ ಸ್ನೇಹಿತರ ಅಪಾರ ಕರುಣೆಯನ್ನು ಅವರು ಯಾವತ್ತೂ ನೆನಪಿನಲ್ಲಿಟ್ಟುಕೊಂಡಿದ್ದರು. ಈ ಔತಣಕೂಟಗಳಲ್ಲಿ ಹಲವಾರು ಆಸಕ್ತಿಕರ ಘಟನೆಗಳು ಕೂಡ ನಡೆಯುತ್ತಿದ್ದವು. ಅವುಗಳಲ್ಲಿ ಒಂದನ್ನು ಫೆಬ್ರವರಿ ೨೫, ೧೮೯೪ರಂದು ಈವ್‌ನಿಂಗ್ ನ್ಯೂಸ್ ಎಂಬ ಪತ್ರಿಕೆಯು ಪ್ರಕಟಿಸಿದ ವರದಿಯಲ್ಲಿ ಕಾಣಬಹುದು:

''ಸ್ವಾಮಿ ವಿವೇಕಾನಂದರು ಡೆಟ್ರಾಯ್ಟ್ ನಗರಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಅನೇಕ ಆಸಕ್ತಿಕರ ಘಟನೆಗಳು ನಡೆದವು. ಅವುಗಳು ಅವರಿಗೆ ತಮಾಷೆಯೆಂದು ತೋರಿದರೂ, ಅವು ಅಮೆರಿಕದ ಅಹಂಪ್ರಜ್ಞೆಗೆ ಪೆಟ್ಟು ನೀಡುವ ಸಂದರ್ಭಗಳಾಗಿದ್ದವು. ಇಂಥ ಒಂದು ಸಂದರ್ಭದ ಬಗ್ಗೆ ಒಬ್ಬ ಮಹಿಳೆ ಹೀಗೆ ಹೇಳುತ್ತಾಳೆ:

''ಡೆಟ್ರಾಯ್ಟ್ ನಗರದ ಪ್ರತಿಷ್ಠಿತ ಗಣ್ಯವ್ಯಕ್ತಿಗಳು ಎನ್ನಿಸಿಕೊಂಡವರಿಗೂ, ಸ್ವಾಮಿ ವಿವೇಕಾನಂದರಿಗೂ ಜ್ಞಾನಮಟ್ಟದಲ್ಲಿ ತುಲನೆ ಮಾಡಿದರೆ ನನಗೆ ನಿಜವಾಗಲೂ ನಾಚಿಕೆಯಾಗುತ್ತದೆ. ಒಂದು ಔತಣಕೂಟದಲ್ಲಿ ಒಬ್ಬ ಸಭ್ಯ ಗೃಹಸ್ಥನು, 'ರಸಾಯನ ಶಾಸ್ತ್ರದ ವಿಷಯದಲ್ಲಿ ನೀವು ಯಾವ ಪುಸ್ತಕಗಳು ಉತ್ತಮ ಎಂದು ಸಲಹೆ ಮಾಡುತ್ತೀರಿ' ಎಂಬ ಅಬದ್ಧವಾದ ಪ್ರಶ್ನೆಯನ್ನು ಕೇಳಿದನು. ಆಶ್ಚರ್ಯವೋ ಎಂಬಂತೆ, ಆ ಹಿಂದೂ ಸಂನ್ಯಾಸಿಯು ಆ ವಿಜ್ಞಾನದ ಮೇಲೆ ಲಭ್ಯವಿರುವ ಹಲವಾರು ಪುಸ್ತಕಗಳ ಒಂದು ದೊಡ್ಡ ಪಟ್ಟಿಯನ್ನೇ ನೀಡಿಬಿಟ್ಟರು. ಈ ಬಗ್ಗೆ ಒಬ್ಬ ಹಿಂದೂ ಸಂನ್ಯಾಸಿಗಿಂತಲೂ ಹೆಚ್ಚಾಗಿ, ಒಬ್ಬ ಅಮೆರಿಕನ್ ಪ್ರಜೆಯೇ ಹೆಚ್ಚಾಗಿ ತಿಳಿದುಕೊಂಡಿರುತ್ತಾನೆ ಎಂದು ನಾವು ಅಂದುಕೊಳುತ್ತೇವೆ. ಇದೇ ರೀತಿ, ಇನ್ನೊಬ್ಬ ಸಭ್ಯ ವ್ಯಕ್ತಿಯು ಖಗೋಳ ಶಾಸ್ತ್ರದ ಬಗ್ಗೆ ದೊರಕುವ ಪುಸ್ತಕಗಳ ಬಗ್ಗೆ ಸ್ವಾಮೀಜಿಯವರನ್ನು ಪ್ರಶ್ನಿಸಿದನು. ಸ್ವಾಮಿ ವಿವೇಕಾನಂದರು ಅವನಿಗೂ ಸಮರ್ಥವಾಗಿ ಉತ್ತರಿಸಿದುದಲ್ಲದೆ, ಆ ವಿಷಯದ ಬಗ್ಗೆ ಲಭ್ಯವಿರುವ ಹಲವು ಪುಸ್ತಕಗಳ ಪಟ್ಟಿಯನ್ನು ನೀಡಿದರು. ಈ ಪರಿಸ್ಥಿತಿ ತನ್ನ ಶಿಖರವನ್ನು ಮುಟ್ಟಿದ್ದು ಒಬ್ಬ ಮಹಿಳೆ 'ಕ್ರೈಸ್ತ' ಎಂಬ ಪದದ ಅರ್ಥವನ್ನು ತಿಳಿದುಕೊಳ್ಳಲು ಇಚ್ಛಿಸಿದಾಗ. ಸ್ವಾಮೀಜಿ, ಹಿಂದಿನ ಪ್ರಸಂಗಗಳಂತೆ, ಆ ಮಹಿಳೆ ಇಚ್ಛಿಸಿದ ಎಲ್ಲ ಮಾಹಿತಿಯನ್ನೂ ನೀಡಿದರು. ಆದರೆ ಈಗ ಅವರ ಧ್ವನಿಯು ವ್ಯಂಗ್ಯವಾಗಿತ್ತು.

''ಪ್ರಾಯಶಃ ಹತ್ತೊಂಬತ್ತನೆಯ ಶತಮಾನದ ನಾಗರಿಕತೆ ಮತ್ತು ಸಂಸ್ಕೃತಿಯ ಬಹುಮುಖ್ಯವಾದ ಒಂದು ಪ್ರಶ್ನೆಯನ್ನು ಒಬ್ಬ ಮಹಿಳೆ ಕೇಳಿದಳು. ಆ ಪ್ರಶ್ನೆಯೆಂದರೆ, 'ನೀವು ಇಂಗ್ಲಿಷರನ್ನು ಇಷ್ಟಪಡುತ್ತೀರಾ?' ಎನ್ನುವುದಾಗಿತ್ತು. ಸ್ವಾಮೀಜಿ ಸಹಜವಾಗಿಯೇ ತಾವು ಇಂಗ್ಲಿಷಿನವರನ್ನು ಇಷ್ಟಪಡುವುದಿಲ್ಲ ಎಂದು ಉತ್ತರ ನೀಡಿದರು. ಆದರೂ ಆಕೆ ಪ್ರಶ್ನಿಸುವುದನ್ನು ನಿಲ್ಲಿಸಲಿಲ್ಲ. ಆಕೆ ಸಿಪಾಯಿ ದಂಗೆಯ ಪ್ರಸ್ತಾಪ ಮಾಡಿದಳು. ಆಗ ಹಿಂದೂ ಸಂನ್ಯಾಸಿಯು ಉದ್ವೇಗಗೊಂಡರು. ಆಗ ಆ ಮಹಿಳೆ ವಿರೋಧಾಭಾಸವೋ ಎಂಬಂತೆ ಮುಗುಳ್ನಕ್ಕಳು ಮತ್ತು ಹೇಳಿದಳು: 'ನಾನು ನಿಮ್ಮ ಪೂರ್ವದೇಶಗಳ ತತ್ತ್ವಶಾಸ್ತ್ರೀಯ ನೀರವತೆಯನ್ನು ಕದಡಬಲ್ಲೆನು ಎಂದು ನನಗೆ ಅನ್ನಿಸಿತ್ತು.' ''

ಸ್ವಾಮಿ ವಿವೇಕಾನಂದರು ಉದ್ವೇಗಗೊಂಡಿದ್ದು ಬಹು ವಿರಳವೇ ಎಂದು ಹೇಳಬೇಕು. ತಮ್ಮ ವಿರೋಧಿಗಳು ಅದೆಷ್ಟು ಕಟುವಾಗಿ ಮಾತನಾಡಿದರೂ, ಅವರು ತಮ್ಮ ಮನಸ್ಸಿನ ಶಾಂತಿಯನ್ನು ಕಳೆದುಕೊಳ್ಳುತ್ತಿರಲಿಲ್ಲ. ಯಾವತ್ತೂ ಶಾಂತವಾಗಿ ಇರುತ್ತಿದ್ದರು. ಆದರೆ ಒಂದೇ ಒಂದು ವಿಷಯದಲ್ಲಿ ಅವರಿಗೆ ಉದ್ವೇಗಗೊಳ್ಳುವುದನ್ನು ತಡೆದುಕೊಳ್ಳಲಾಗುತ್ತಿರಲಿಲ್ಲ. ಅದೂ ಕೂಡ ಆರಂಭದ ದಿನಗಳಲ್ಲಿ ಮಾತ್ರವೇ ಅವರು ಹಾಗೆ ಉದ್ವೇಗಗೊಳ್ಳುತ್ತಿದ್ದರು. ಆ ವಿಷಯವೆಂದರೆ, ಭಾರತದಲ್ಲಿನ ಬ್ರಿಟಿಷರ ಆಡಳಿತ. ಆ ವಿಷಯವನ್ನು ಬಹುತೇಕ ಯಾರೂ ಎತ್ತಿಕೊಳ್ಳುತ್ತಿರಲಿಲ್ಲ.

ಸ್ವಾಮೀಜಿಯವರಿಗೇನೂ ಚರ್ಚೆ ಮಾಡಲು ವಿಷಯಗಳ ಕೊರತೆ ಇರಲಿಲ್ಲ. ಅವರು ತಮ್ಮ ಸಭಿಕರನ್ನು ಜಗತ್ತಿನಲ್ಲಿ ಇರುವ ಎಲ್ಲ ವಿಷಯಗಳ ಬಗ್ಗೆಯೂ ತಮಗೆ ಇರುವ ಅಪಾರ ಜ್ಞಾನದ ಪ್ರದರ್ಶನದಿಂದ ಆಶ್ಚರ್ಯಚಕಿತಗೊಳಿಸುತ್ತಿದ್ದರು. ಖಾಸಗಿ ಸಭೆಗಳಲ್ಲಿ ಅವರು ವಿಜ್ಞಾನ, ಕಲೆ, ರಾಜಕೀಯ ಮುಂತಾದ ಹತ್ತು ಹಲವು ವಿಷಯಗಳ ಬಗ್ಗೆ ಹೊಸ ಬೆಳಕನ್ನು ಚೆಲ್ಲುತ್ತಿದ್ದರು. ಇದಕ್ಕಾಗಿ ಬರಿಯ ಬೌದ್ಧಿಕ ಜ್ಞಾನ ಸಾಕಾಗುವುದಿಲ್ಲ ; ಆಧ್ಯಾತ್ಮಿಕ ಒಳನೋಟಗಳು ಅತ್ಯವಶ್ಯವಾಗಿದ್ದವು. ಅದು ಸ್ವಾಮೀಜಿಯವರಿಗೆ ಇತ್ತು. ಇಷ್ಟಾದರೂ, ಸ್ವಾಮೀಜಿಯವರ ಹೃದಯಕ್ಕೆ ಅತ್ಯಂತ ಹತ್ತಿರವಾದ ವಿಷಯವೆಂದರೆ 'ಭಾರತ'. ತಮ್ಮ ತಾಯಿನಾಡಿನ ಬಡವರ ಉದ್ಧಾರಕ್ಕಾಗಿ ಹಣಸಂಗ್ರಹಣೆ ಮಾಡಬೇಕೆಂಬ ತವಕ, ಅವರ ಮನಸ್ಸಿನಲ್ಲಿ, ಆ ಡೆಟ್ರಾಯಿಟ್ಟಿನ ದಿನಗಳಲ್ಲಿ ಯಾವತ್ತೂ ಮನೆಮಾಡಿತ್ತು.

ಮಿಸ್ಟರ್ ಚಾರ್ಲ್ಸ್ ಎಲ್ ಫ್ರೀರ್ ಎನ್ನುವವನು ಒಬ್ಬ ಯುವ ರೈಲ್ವೇ ಮತ್ತು ಉದ್ಯಮಗಳ ಬಂಡವಾಳಗಾರ. ಅವನು ಒಂದು ದೊಡ್ಡ ರೈಲ್ವೇ ಕಂಪನಿಯಲ್ಲಿ ಪಾಲುದಾರನಾಗಿದ್ದನು. ಅದು ಅಮೆರಿಕೆಯಲ್ಲಿಯೇ ರೈಲ್ವೇ ಬೋಗಿಗಳನ್ನು ತಯಾರು ಮಾಡುವ ಬಹುದೊಡ್ಡ ಸಂಸ್ಥೆಯಾಗಿತ್ತು. ಅವನು ೧೯ನೆಯ ಶತಮಾನದ ಕಡೆಯ ಭಾಗದಲ್ಲಿ ಬಹಳಷ್ಟು ಸಂಪತ್ತನ್ನು ಗಳಿಸಿದನು. ಡೆಟ್ರಾಯ್ಟ್ ನಗರವು ವಾಹನಗಳ ತಯಾರಿಕಾ ಕೇಂದ್ರವಾಗಿ ಇನ್ನೂ ರೂಪುಗೊಂಡಿರಲಿಲ್ಲ. ಆಗಲೇ ಚಾರ್ಲ್ಸ್ ಅತ್ಯಾಧಿಕ ಹಣವನ್ನು ಸಂಪಾದಿಸಿದ್ದನು. ಬಹುತೇಕ ಉದ್ಯಮಿಗಳು ಹಣವನ್ನು ಸಂಪಾದಿಸುವುದರಲ್ಲಿ, ಹಾಗೆಯೇ ಖರ್ಚುಮಾಡುವುದರಲ್ಲಿ ತಲ್ಲೀನರಾಗಿರುತ್ತಾರೆ. ಆದರೆ ಈತನು ಅದಕ್ಕೆ ಹೊರತಾಗಿದ್ದನು. ಕೊಡುಗೈ ದಾನಿಯಾಗಿದ್ದನು.

ಆತನ ಮನೆಯಲ್ಲಿ ಒಂದು ಸಂಜೆ ಔತಣಕೂಟ ಏರ್ಪಾಡಾಗಿತ್ತು. ಅದರಲ್ಲಿ ಸ್ವಾಮಿ ವಿವೇಕಾನಂದರು ಭಾಗವಹಿಸಿದ್ದರು. ಅದರ ವರದಿಯನ್ನು ಟ್ರೈಬ್ಯೂನ್ ಎಂಬ ಪತ್ರಿಕೆಯು ತನ್ನ ಫೆಬ್ರವರಿ ೧೮, ೧೮೯೪ರ ಸಂಚಿಕೆಯಲ್ಲಿ ಪ್ರಕಟಿಸಿತು. ಇದನ್ನು ಬರೆದವರು ಆ ಔತಣಕೂಟದಲ್ಲಿ ಭಾಗವಹಿಸಿದ ಒಬ್ಬ ಅತಿಥಿಗಳು. ಈ ವರದಿ ಹೀಗೆ ಹೇಳುತ್ತದೆ:

''ಡೆಟ್ರಾಯ್ಟ್ ನಗರದ ಸಾಂಸ್ಕೃತಿಕ ವಲಯದಲ್ಲಿ ಹಿಂದೆಂದೂ ಇಂಥ ಸಂಚಲನವನ್ನು ನಾವು ಕಂಡಿರಲಿಲ್ಲ. ಅಂಥ ಒಂದು ಸಂಚಲನವನ್ನು ಸ್ವಾಮಿ ವಿವೇಕಾನಂದರೆಂಬ ಹಿಂದೂ ಸಂನ್ಯಾಸಿಯು ಮೂಡಿಸಿದ್ದಾರೆ. ನಮ್ಮ ಭಾಷೆಯಾದ ಇಂಗ್ಲಿಷಿನಲ್ಲಿ ಅವರದು ಅಭೂತಪೂರ್ವವಾದ ಪ್ರಭುತ್ವ. ಹೀಗಾಗಿ ನಮ್ಮ ದೇಶದ ಬಗ್ಗೆ ಮತ್ತು ಸಂಸ್ಕೃತಿಯ ಬಗ್ಗೆ ಹಲವಾರು ವಿಚಾರಗಳನ್ನು ಪೂರ್ವದೇಶಗಳ ದೃಷ್ಟಿಕೋನದಿಂದ ಇವರ ಮೂಲಕ ತಿಳಿದುಕೊಳ್ಳುವ ಸದವಕಾಶ ನಮಗೆ ಪ್ರಾಪ್ತವಾಗಿದೆ. ಈ ಮೂಲಕ ನಾವು ಬಹಳಷ್ಟು ಕೇಳಿರುವ ಪೂರ್ವದೇಶಗಳ ನಾಗರಿಕತೆ ಮತ್ತು ತತ್ತ್ವಶಾಸ್ತ್ರಗಳ ಬಗ್ಗೆ ತಿಳಿದುಕೊಳ್ಳುವ ಭಾಗ್ಯ ನಮ್ಮದು.

''ತಮ್ಮ ಸಾರ್ವಜನಿಕ ಪ್ರವಚನಗಳಲ್ಲಿ ಮತ್ತು ವೈಯಕ್ತಿಕ ಸಂಭಾಷಣೆಗಳಲ್ಲಿ ಈ ಹಿಂದೂ ಸಂನ್ಯಾಸಿಯು ಮುಕ್ತವಾಗಿ ಮತ್ತು ನಿಷ್ಪಕ್ಷವಾಗಿ ಮಾತನಾಡಿದರು. ಭಾರತದ ಬಹುತೇಕ ಜನಸಾಮಾನ್ಯರು ಅತ್ಯಂತ ಕಡುಬಡವರು, ಬಹಳ ಅಜ್ಞಾನಿಗಳು ಮತ್ತು ವಿವಿಧ ಮತವರ್ಗಗಳಲ್ಲಿ ಹರಿದುಹಂಚಿಹೋಗಿದ್ದಾರೆ ಎನ್ನುವುದನ್ನು ಅವರು ಒಪ್ಪಿಕೊಂಡರು. ಹಾಗೆಯೇ ಆ ಜನರು ಬಗೆಬಗೆಯ ಪೂಜಾ ಪದ್ಧತಿಯನ್ನು ಅನುಸರಿಸುತ್ತಾರೆ; ವಿಗ್ರಹಾರಾಧನೆಯಿಂದ ಹಿಡಿದು ಅತ್ಯಂತ ಉದಾರವಾದ ದೈವೀ ಕಲ್ಪನೆಯ ತನಕ ಎಲ್ಲದಕ್ಕೂ ಇಲ್ಲಿ ಅವಕಾಶವಿದೆ ಎಂದು ಸ್ವಾಮಿ ವಿವೇಕಾನಂದರು ಒತ್ತಿಹೇಳಿದರು. ಅಮೆರಿಕೆಯಲ್ಲಿ ತಮ್ಮ ಕಾರ್ಯೋದ್ದೇಶ ಮತಾಂತರವನ್ನು ಮಾಡುವುದಲ್ಲ. ತಾವು ಭಾರತದಲ್ಲಿ ಜನಸಾಮಾನ್ಯರಿಗಾಗಿ ಒಂದು ವಿದ್ಯಾಕೇಂದ್ರವನ್ನು ತೆರೆಯುವ ಯೋಜನೆಯನ್ನು ಹಾಕಿಕೊಂಡಿದ್ದೇವೆ; ಅದರಲ್ಲಿ ಸಾಮಾನ್ಯ ಜನರಿಗೆ ಶಿಕ್ಷಣವನ್ನು ನೀಡುವ ಶಿಕ್ಷಕರನ್ನು ತರಬೇತಿ ಮಾಡುವ ಉದ್ದೇಶವಿದೆ; ಅದಕ್ಕಾಗಿ ಹಣಸಂಗ್ರಹ ಮಾಡಲು ನಾನು ಬಂದಿದ್ದೇನೆ ಎಂದು ಸ್ವಾಮಿ ವಿವೇಕಾನಂದರು ಹೇಳಿಕೊಂಡರು. ಆ ಶಿಕ್ಷಕರು ಸಾಮಾನ್ಯ ಜನತೆಯ ಬಳಿಗೆ ಹೋಗುವರು ಮತ್ತು ಅವರಲ್ಲಿ ಬೆಳೆದುನಿಂತ ಮೌಢ್ಯಗಳನ್ನು ನಿವಾರಣೆ ಮಾಡಲು ಪ್ರಯತ್ನಿಸುವರು.

''ಭಾರತವು ಪುರೋಹಿತಶಾಹಿಯಿಂದ ಬಹಳಷ್ಟು ಬಾಧಿಸಲ್ಪಟ್ಟಿದೆ ಎಂದು ಸ್ವಾಮಿ ವಿವೇಕಾನಂದರು ಹೇಳಿದರು. ಪುರೋಹಿತರು ಸತ್ಯವನ್ನು ಮರೆಮಾಚುತ್ತಾರೆ; ಕೆಡುಕನ್ನು ಹರಡುತ್ತಾರೆ; ಸತ್ಯತತ್ತ್ವಗಳಿಗೆ ತಮ್ಮದೇ ಆದ ಸಂಕುಚಿತ ಮತ್ತು ಕೀಳುಮಟ್ಟದ ವಿವರಣೆಯನ್ನು ಕೊಡುತ್ತಾರೆ. ಇದು ಜನರನ್ನು ದಿಕ್ಕುತಪ್ಪಿಸುತ್ತದೆ ಮತ್ತು ಅವರ ನೈತಿಕ ಪ್ರಗತಿಯನ್ನು ಕುಂಠಿಸುತ್ತದೆ.

''ಸ್ವಾಮಿ ವಿವೇಕಾನಂದರು ಎಲ್ಲ ಮತ ಮತ್ತು ಪಂಗಡಗಳನ್ನು ಸಮನಾಗಿ ಉದಾರಭಾವದಿಂದ ನೋಡುತ್ತಾರೆ. ಅವರು ವಿಗ್ರಹಾರಾಧನೆಯಲ್ಲಿಯೂ ಒಳ್ಳೆಯತನವನ್ನೇ ಕಾಣುತ್ತಾರೆ. ಅಮೂರ್ತ ಭಾವನೆಗಳನ್ನು ಅರ್ಥಮಾಡಿಕೊಳ್ಳಲಾಗದವರಿಗೆ ವಿಗ್ರಹಾರಾಧನೆ ಬಹುಮುಖ್ಯವಾಗುತ್ತದೆ. ಇದಲ್ಲದೆ, ಪಾಶ್ಚಾತ್ಯ ನಾಗರಿಕತೆಯಲ್ಲಿಯೂ ಪುರೋಹಿತಶಾಹಿಯು ಪ್ರಗತಿಯನ್ನು ಕುಂದಿಸಿದ್ದನ್ನು ಕಾಣಬಹುದು. ಹಾಗೂ ಪಾಶ್ಚಾತ್ಯ ಜನರೂ ವಿಗ್ರಹಾರಾಧನೆಯಿಂದ ಮುಕ್ತರಾಗೇನೂ ಇಲ್ಲ. ಏಕೆಂದರೆ ಕ್ರೈಸ್ತರ ಹಲವಾರು ಮಂದಿರಗಳಲ್ಲಿ ದೇವತಾ ಮೂರ್ತಿಗಳು ಮತ್ತು ಚಿತ್ರಗಳನ್ನು ನಾವು ಕಾಣುತ್ತೇವೆ. ಚರ್ಚಿನಲ್ಲಿ ಪವಿತ್ರವೆಂದು ಭಾವಿಸುವ ವೇದಿಕೆ ಕೂಡ ಒಂದು ಬಗೆಯ ವಿಗ್ರಹಾರಾಧನೆಯೇ ಸರಿ.

''ಇಷ್ಟಾದರೂ ಸ್ವಾಮಿ ವಿವೇಕಾನಂದರು ಎರಡು ಮುಖ್ಯ ಸಂಗತಿಗಳ ಕಾರಣದಿಂದ ನಮ್ಮ ದೇಶವನ್ನು ಹಾಡಿಹೊಗಳುತ್ತಾರೆ. ಮೊದಲನೆಯದು ಇಲ್ಲಿ ಮಹಿಳೆಯರಿಗೆ ನೀಡಿರುವ ಉನ್ನತ ಸ್ಥಾನಮಾನ. ಎರಡನೆಯದು, ಬಡಜನರಿಗಾಗಿ ನಮ್ಮ ದೇಶದ ಜನ ತೋರುವ ಅನುಕಂಪೆ ಮತ್ತು ನೀಡುವ ದಾನಧರ್ಮಗಳು. ಹಾಗೆಯೇ ಈ ದೇಶದ ಸುಸಜ್ಜಿತ ಆಸ್ಪತ್ರೆಗಳು, ದಾನಧರ್ಮದ ಸಂಸ್ಥೆಗಳು ಮತ್ತು ಯಂತ್ರಗಳು – ಇವೆಲ್ಲವನ್ನೂ ಸ್ವಾಮಿ ವಿವೇಕಾನಂದರು ಮೆಚ್ಚಿಕೊಳ್ಳುತ್ತಾರೆ. ಆದರೂ ಅವರಿಗೆ ಭೌತಿಕ ಪ್ರಗತಿಯಲ್ಲಿ ಒಲವಿಲ್ಲ, ಏಕೆಂದರೆ ಅವರ ಪ್ರಕಾರ ಅದು ಮನುಷ್ಯರನ್ನು ಉತ್ತಮರನ್ನಾಗಿ ಮಾಡುವುದಿಲ್ಲ. ಅಮೆರಿಕೆಯ ನಾಗರಿಕತೆ ಇನ್ನೂ ಯೌವನದ ಸ್ಥಿತಿಯಲ್ಲಿದೆ ಎಂದು ಅವರು ಹೇಳುತ್ತಾರೆ. ಅದು ಇನ್ನೂ ಪ್ರಬುದ್ಧವಾಗಬೇಕು ಎಂದು ಸ್ವಾಮಿ ವಿವೇಕಾನಂದರು ಬಯಸುತ್ತಾರೆ.''

ಸ್ವಾಮಿ ವಿವೇಕಾನಂದರು ಭಾರತದ ತಮ್ಮ ಕಾರ್ಯಕ್ಕಾಗಿ ವಿವಿಧ ವ್ಯಕ್ತಿಗಳಿಂದ ಎಷ್ಟು ದೇಣಿಗೆಯನ್ನು ಪಡೆದುಕೊಂಡರು ಎಂಬ ಮಾಹಿತಿ ತಿಳಿದುಬಂದಿಲ್ಲ. ಆದರೆ ಅನೇಕ ಧನಿಕರು ಸ್ವಾಮೀಜಿಯವರ ಈ ಘನಕಾರ್ಯಕ್ಕಾಗಿ ದೊಡ್ಡ ಮಟ್ಟದ ಧನ ಸಹಾಯ ಮಾಡಿರುವುದಂತೂ ನಿಜ. ಅವರಲ್ಲಿ ಮಿಸ್ಟರ್ ಚಾರ್ಲ್ಸ್ ಎಲ್ ಫ್ರೀರ್ ಕೂಡ ಒಬ್ಬನು ಎನ್ನುವುದು ನಿಸ್ಸಂಶಯ. ಏಕೆಂದರೆ ಸ್ವಾಮೀಜಿಯವರು ಡೆಟ್ರಾಯ್ಟ್ ಪಟ್ಟಣವನ್ನು ಬಿಟ್ಟು ತೆರಳಿದ ಮೇಲೆ ಅವರ ಆತಿಥೇಯರಾಗಿದ್ದ ಶ್ರೀಮತಿ ಬ್ಯಾಗ್ಲಿ ಅವರ ಮಗಳು ಅವರಿಗೆ ಒಂದು ಪತ್ರವನ್ನು ಬರೆಯುತ್ತಾರೆ. ಅದರಲ್ಲಿನ ಕೆಲವು ವಾಕ್ಯಗಳು ಹೀಗಿವೆ:

''ಮಿಸ್ಟರ್ ಫ್ರೀರ್ ಅವರ ಮನೆಯಲ್ಲಿ ನಡೆದ ಔತಣಕೂಟಕ್ಕೆ ಬಂದಿದ್ದು ನಿಮಗೆ ನೆನಪಿನಲ್ಲಿ ಇರಬಹುದು. ಅವರು ನಿನ್ನೆ ಸಂಜೆ ಇನ್ನೂರು ಡಾಲರುಗಳ ಒಂದು ಚೆಕ್ ಅನ್ನು ನನ್ನ ತಾಯಿಗೆ ಕಳುಹಿಸಿಕೊಟ್ಟಿದ್ದಾರೆ. ಅದನ್ನು ನಿಮಗೆ ನೀಡಲು ಹೇಳಿದ್ದಾರೆ. ಈ ಹಣವನ್ನು ಕೂಡ ನಾನು ನಿಮಗೆ ಕಳುಹಿಸುತ್ತಿರುವ ಡ್ರಾಫ್ಟ್‌ನಲ್ಲಿ ಸೇರಿಸಿದ್ದೇನೆ.

ನನ್ನನ್ನು ನಂಬಿರಿ. ನನ್ನ ಸ್ನೇಹಿತರಾದ ಫ್ರೀರ್ ಅವರಂಥ ವ್ಯಕ್ತಿಗಳು ನಿಮ್ಮ ಕಾರ್ಯದಲ್ಲಿ ಆಸಕ್ತಿಯನ್ನು ತೋರಿಸಿ, ಸಹಾಯ ಹಸ್ತವನ್ನು ಚಾಚುತ್ತಾರೆ ಎಂದರೆ ನೀವು ಒಡನೆ ಭಾರತಕ್ಕೆ ತಿರುಗಿ ಹೋಗುವ ಆವಶ್ಯಕತೆ ಇಲ್ಲ. ನೀವು ಭಾರತದಲ್ಲಿ ಸ್ಥಾಪಿಸಬೇಕೆಂದಿರುವ ವಿದ್ಯಾಶಾಲೆಗಾಗಿ ನಿಮ್ಮ ಅಗಾಧಪ್ರಯತ್ನವನ್ನು ಮಾಡದೆಯೇ ನೀವು ಹಿಂತಿರುಗಿ ಹೋಗಬೇಕಾದ್ದಿಲ್ಲ. ನಿಮ್ಮ ವೈಯಕ್ತಿಕ ಪ್ರಭಾವ; ಅದರೊಂದಿಗೆ ಅಯಸ್ಕಾಂತದಂತೆ ಸೆಳೆಯುವ ನಿಮ್ಮ ಶಕ್ತಿಶಾಲಿ ಹಾಗೂ ಎಲ್ಲರನ್ನೂ ಆಳುವ ಆ ಸಾನ್ನಿಧ್ಯ – ಇದೇ ನಿಮ್ಮ ಈ ಮನವಿಯನ್ನು ಪ್ರಭಾವಶಾಲಿಯನ್ನಾಗಿ ಮಾಡಬಲ್ಲುದು. ಈ ಕಾರ್ಯದಲ್ಲಿ ನಾವು ಏನಾದರೂ ಸಹಾಯವನ್ನು ಮಾಡಬೇಕಾಗಿದ್ದರೆ, ಅದನ್ನು ನೀವು ಖಂಡಿತ ಕೇಳುತ್ತೀರಿ ಎಂದು ನಂಬಿದ್ದೇನೆ. ನಿಮ್ಮ ಈ ಘನಕಾರ್ಯಕ್ಕಾಗಿ ನಮ್ಮ ಸಹಾನುಭೂತಿ ಮತ್ತು ಗೌರವಗಳು ಯಾವತ್ತೂ ನಿಮ್ಮದಾಗಿರುತ್ತವೆ.

ಇಂತಿ ನಿಮ್ಮ ಹಿತೈಷಿ,

ಫ್ಲೋರೆನ್ಸ್ ಬ್ಯಾಗ್ಲಿ ಶೆರ್‌ಮ್ಯಾನ್

ಮೇಲೆ ಹೇಳಿದ ಡ್ರಾಫ್ಟಿನಲ್ಲಿ ಸ್ವಾಮೀಜಿ ತಮ್ಮ ಪ್ರವಚನಗಳಿಂದ ಹಾಗೂ ದೇಣಿಗೆಗಳಿಂದ ಸ್ವೀಕರಿಸಿದ ಹಣ ಕೂಡ ಸೇರಿತ್ತು. ಇದನ್ನು ಅವರು ಶ್ರೀಮತಿ ಹೇಲ್ ಅವರಿಗೆ ಬರೆದ ತಮ್ಮ ಒಂದು ಪತ್ರದಲ್ಲಿ ಉಲ್ಲೇಖಿಸುತ್ತಾರೆ. ಇದಲ್ಲದೆ ಸ್ವಾಮೀಜಿ ಮೇರಿ ಹೇಲ್‌ಗೆ ಮಾರ್ಚ್ ೩೦, ೧೮೯೪ರಂದು ಒಂದು ಪತ್ರವನ್ನು ಬರೆಯುತ್ತಾರೆ. ಆ ಸಮಯದಲ್ಲಿ ಸ್ವಾಮೀಜಿ ಕಟ್ಟಕಡೆಯದಾಗಿ ಡೆಟ್ರಾಯ್ಟ್ ನಗರದಿಂದ ತೆರಳುವವರಿದ್ದರು. ಆ ಪತ್ರದಲ್ಲಿ ಶ್ರೀಮತಿ ಬ್ಯಾಗ್ಲಿಯ ಮಗಳನ್ನು ಸ್ವಾಮೀಜಿ ಉಲ್ಲೇಖಿಸುತ್ತಾರೆ. ಆಕೆ ತಮಗೆ ಅನೇಕ ಸುಂದರ ಕೊಡುಗೆಗಳನ್ನು ನೀಡಿದಳು ಎಂದು ನಮೂದಿಸುತ್ತಾರೆ. ದೇವರು ಅವರೆಲ್ಲರನ್ನೂ ಆಶೀರ್ವದಿಸಲಿ ಎಂದು ಉದ್ಗರಿಸುತ್ತಾರೆ. ''ನಾನೀಗ ಸಮಾಜದ ವ್ಯಕ್ತಿಯಾಗಿಬಿಟ್ಟೆ ! ಭಗವಂತನೇ, ಇನ್ನು ಇನ್ನೇನು ಕಾದಿದೆಯೋ, ದೇವರೇ ಬಲ್ಲ. ದೀರ್ಘವಾದ ಬದುಕು ಹಲವಾರು ವಿಚಿತ್ರ ಅನುಭವಗಳನ್ನು ಉಂಟುಮಾಡುತ್ತದೆ'' ಎಂದು ಸ್ವಾಮೀಜಿ ಈ ಪತ್ರದ ಕೊನೆಯಲ್ಲಿ ಹೇಳಿಕೊಳ್ಳುತ್ತಾರೆ.

*(ಮುಂದುವರಿಯುವುದು)*